91

ಕೆಲವು ಉಪಯುಕ್ತ ಸಲಹೆಗಳು

[ದ್ವಿತೀಯ ಮುದ್ರಣ]

★

ಸಂಗ್ರಾಹಕರು:

ಶ್ರೀ। ಬಳ್ಕೂರು ಸುಬ್ರಾಯ ಅಡಿಗ,

ಗಂಗೊಳ್ಳಿ.

1959.

ಒಂದಾಣೆ ಮಾಲೆ

ಕೆಲವು ಉಪಯುಕ್ತ ಸಲಹೆಗಳು

ಕಲೆಗಳು

ಶಾಯಿ ಕಲೆ: ಪೊಟೆಶಿಯಂ ಪ'ರ್ಮಾಂಗನೇಟ್ ಅಥವಾ 'ಕ್ಲೋರಿನ್'ನ ನೀರಿನಿಂದ ತೊಳೆಯಬೇಕು. ಸಾಧಾರಣ ಶಾಯಿಯ ಕಲೆ ಬಿದ್ದರೆ ಕಲೆ ಬಿದ್ದ ಭಾಗವನ್ನು ಉಪ್ಪಿನ ದ್ರಾವಣದಲ್ಲಿ ನೆನೆ ಇಡಬೇಕು. ಆ ಮೇಲೆ ಸಾಬೂನನ್ನು ತಿಕ್ಕಿ ತೊಳೆದರೆ ಕಲೆಗಳು ಹೋಗುತ್ತವೆ. (ಸೋಡಾಖಾರದಿಂದಲೂ ಕೆಲವು ಕಲೆಗಳನ್ನು ತೊಳೆಯಬಹುದು.)

ಅಥವಾ ಒಂದು ದೊಡ್ಡ ಗಾತ್ರದ ಟೊಮೆಟೊ ಹಣ್ಣನ್ನು ಜಜ್ಜಿ, ಅದರ ತಿರುಳನ್ನು ಶಾಯಿ ಬಿದ್ದ ಸ್ಥಳದ ಮೇಲೆ ಹರಡಿ, ಹಾಗೆಯೇ ಒಂದು ದಿನ ಇಡಿರಿ. ಮರುದಿನ ತಿರುಳನ್ನು ಕೆರೆದು ತೆಗೆದು, ಬಟ್ಟೆಯನ್ನು ಬಿಸಿ ನೀರಿನಿಂದ ತೊಳೆದುಬಿಟ್ಟರೆ, ಶಾಯಿಯ ಕಲೆ ಮಾಯವಾಗುವುದು.

ರಕ್ತದ ಕಲೆ: (1) ವಸ್ತ್ರದ ಮೇಲೆ ರಕ್ತದ ಕಲೆಗಳುಂಟಾಗಿದ್ದರೆ ಅವನ್ನು ಕೂಡಲೇ ತಣ್ಣೀರಿನಲ್ಲಿ ಮುಳುಗಿಸಿರಿ. ನೊರೆಯುಳ್ಳ ಸಾಬೂನಿನಿಂದ ತೊಳೆದು ಬೋರೆಕ್ಸ್ ನೀರಿನಲ್ಲಿ ಬೇಯಿಸಿರಿ. ಸುಮಾರು ಒಂದು ಗೆಲನ್ ನೀರಿಗೆ ಒಂದು ದೊಡ್ಡ ಚಮಚೆಯಷ್ಟು ಬೋರೆಕ್ಸ್ ಹಾಕಬಹುದು. ನೆತ್ತರಿನ ಕಲೆಗಳು ಪೂರ್ಣ ಮಾಯವಾಗುವುವು. (2) ಅಥವಾ ಕಲೆಯ ಮೇಲೆ ಗಂಜಿಯನ್ನು ಹಚ್ಚಬೇಕು; ಮತ್ತು ಬ್ರಷ್‌ನಿಂದ ಸ್ವಚ್ಛಮಾಡಬೇಕು. ಕಲೆ ಹೋಗುವ ವರೆಗೆ ಹೀಗೆ ಮಾಡುತ್ತಿರಬೇಕು. (3) ಉಪ್ಪು ಅಥವಾ ಅಮೋನಿಯಾ ನೀರಿನಿಂದ ತೊಳೆದರೆ ರಕ್ತ ಹಾಗೂ ಹತ್ತಿಯ ಕಲೆಗಳು ಮಾಯವಾಗುತ್ತವೆ.

ಬೆವರಿನ ಕಲೆ: ಸೋಡಾ ತಿಕ್ಕಿ ಸಾಬೂನಿನಿಂದ ತೊಳೆದು ಸೂರ್ಯಕಿರಣವಿಲ್ಲದ ಜಾಗದಲ್ಲಿ ಒಣಗಿಸಿದರೆ ಬೆವರಿನ ಕಲೆ ಹೋಗುತ್ತದೆ.

ಅಯೋಡಿನಿನ ಕಲೆ: ನವಸಾಗರ ಹಾಕಿದ ನೀರಿನಲ್ಲಿ ಅರ್ಧ ತಾಸು ಮುಳುಗಿಸಿಟ್ಟದ್ದು, ತೊಳೆಯಬೇಕು. ಅಥವಾ ಕಲೆಬಿದ್ದ ಭಾಗವನ್ನು ಬಹುಹೊತ್ತು ಬಿಸಿನೀರಲ್ಲಿ ಇಡಬೇಕು. ಆಗ ಕಲೆ ಹೋಗುತ್ತದೆ. ಅಲ್ಕೋಹಾಲ್ ಹಚ್ಚಿ ಸಾಬೂನಿನಿಂದ ತಿಕ್ಕಿ ತೊಳೆದರೂ ಆಗಬಹುದು.

ತುಕ್ಕಿನ ಕಲೆ: (1) ವಸ್ತ್ರದ ಮೇಲೆ ತುಕ್ಕಿನ ಕಲೆ ಬಿದ್ದರೆ, ಕಲೆ ಬಿದ್ದ ಭಾಗವನ್ನು ಮೊಸರು ಯಾ ಮಜ್ಜಿಗೆಯಲ್ಲಿ ಒಂದು ರಾತ್ರಿ ನೆನೆಹಾಕಿ ಇಡಬೇಕು. ಆ ಮೇಲೆ ನೀರಿನಿಂದ ತೊಳೆದರೆ ಕಲೆ ಹೋಗುತ್ತದೆ: (2) ಅಥವಾ ಒಂದು ಚಮಚೆ ಉಪ್ಪನ್ನು ಎರಡು ಚಮಚೆ ನಿಂಬೆ ರಸಕ್ಕೆ ಸೇರಿಸಿರಿ. ಬಟ್ಟೆಯನ್ನು ಕುದಿಯುವ ನೀರಿನಲ್ಲಿಟ್ಟು ಈ ಮಿಶ್ರಣದಿಂದ ಕಲೆ ಬಿದ್ದ ಭಾಗವನ್ನು ಚೆನ್ನಾಗಿ ಉಜ್ಜಿರಿ. (3) ಕೆಟ್ಟುಹೋದ ಹಾಲಿನಿಂದ ತೊಳೆದಾಗಲೂ ಬಟ್ಟೆಯ ಮೇಲಿನ ತುಕ್ಕಿನ ಕಲೆಗಳು ಹೋಗುತ್ತವೆ.

ಚಹ, ಕಾಫಿ ಕಲೆ: (1) ಇವು ಬಿದ್ದ ಕೂಡಲೇ ಬಿಸಿನೀರಿನಿಂದ ತೊಳೆಯಬೇಕು. ಕಲೆಬಿದ್ದು ಬಹಳ ದಿವಸಗಳಾಗಿದ್ದರೆ ನೀರಿನಲ್ಲಿ ಸೋಡಾ ಯಾ ಕಂಕಣಖಾರ ಕೂಡಿಸಿ ಆ ನೀರಿನಿಂದ ತೊಳೆದರೆ ಕಲೆ ಹೋಗುತ್ತದೆ. (2) ಚಾ ಕಲೆಗಳನ್ನು ದೂರಗೊಳಿಸಲು ಅವುಗಳ ಮೇಲೆ ಗ್ಲಿಸರಿನ್ ಹಚ್ಚಿ ಕೆಲ ಗಂಟೆಗಳ ವರೆಗೆ ಇಡಿರಿ. ಆ ಬಳಿಕ ಎಂದಿನಂತೆ ಒಗೆದ ಬಿಡಿರಿ.

ಔಷಧದ ಕಲೆ: ಔಷಧದ ಕಲೆಗಳನ್ನು ಹೋಗಲಾಡಿಸಬೇಕಿದ್ದರೆ ಅವುಗಳ ಮೇಲೆ ಎಮೋನಿಯಾವನ್ನು ತಿಕ್ಕಿಬಿಡಿರಿ. ಉಣ್ಣೆ ಅಥವಾ ನೂಲಿನ ಬಟ್ಟೆಯ ಮೇಲೆ ಕಲೆ ಬಿದ್ದರೆ ಅವನ್ನು ನೀಲಗಿರಿಯೆಣ್ಣೆಯಿಂದ ತೆಗೆಯಬಹುದು. ಕಲೆ ಬಿದ್ದ ಭಾಗದಲ್ಲಿ ರಾತ್ರಿ ಒಂದೆರಡು ಹನಿ ನೀಲಗಿರಿಯೆಣ್ಣೆ ಹಾಕಿ, ಮುಖಕ್ಕೆ ಹಚ್ಚುವ ಪೌಡರ್ ಸ್ವಲ್ಪ ಸುರಿಯಬೇಕು, ಮರುದಿನ ಬೆಳಗ್ಗೆ ಬ್ರಷ್‌ದಿಂದ ಪೌಡರ್ ತೆಗೆದರೆ ಒಟ್ಟಿಗೆ ಕಲೆಯೂ ಹೋಗಿರುತ್ತವೆ.

ತುಪ್ಪ, ಎಣ್ಣೆ ಅಥವಾ ಮೇಣದ ಕಲೆ: (1) ಹತ್ತಿಯ ಯಾ ಉಣ್ಣೆಯ ಬಟ್ಟೆಗಳ ಮೇಲೆ ತುಪ್ಪ, ಎಣ್ಣೆ ಅಥವಾ ಮೇಣದ ಕಲೆಗಳುಂಟಾಗಿದ್ದರೆ ಅವನ್ನು ದೂರಗೊಳಿಸಲು ಕಬ್ಬಿಣದ ತುಂಡನ್ನು ಬೆಂಕಿಯಲ್ಲಿ ಬಿಸಿಮಾಡಿರಿ. ಮತ್ತು ವಸ್ತ್ರಕ್ಕೆ ಅಂಟಿಕೊಂಡ ತುಪ್ಪ ಎಣ್ಣೆ ಯಾ ಮೇಣವನ್ನು ಕರಗಿಸಿರಿ. ಕರಗಿದ ಬಳಿಕ ಯಾವುದಾದರೂ ಬಟ್ಟೆಯಿಂದ ಅದನ್ನು ಉಜ್ಜಿ ತೆಗೆಯಿರಿ. ಕಲೆ ಮಾಯವಾಗುವುದು. (2) ಅಥವಾ ಕಲೆಯಿರುವ ಜಾಗದ ಮೇಲೆ ಬ್ಲಾಟಿಂಗ್ ಕಾಗದವನ್ನಿಟ್ಟು ಮೇಲಿನಿಂದ ಇಸ್ತ್ರಿಮಾಡಿರಿ. ಬ್ಲಾಟಿಂಗ್ ಕಾಗದವು ಬಿಸಿಯಾಗಿ ಕೆಳಗಿರುವ ಜಿಡ್ಡು ಪದಾರ್ಥವನ್ನು ಕರಗಿಸುವಂತಾದೊಡನೆಯೇ ಇಸ್ತ್ರಿ ತೆಗೆದುಬಿಡಿರಿ. ಆಗ ಕಾಗದವು ಆ ಪಸೆಯನ್ನು ಹೀರಿ, ಕಲೆಯನ್ನು ದೂರಗೊಳಿಸುವುದು.

ಎಸಿಡಿನ ಕಲೆ: (1) ಯಾವುದಾದರೂ ವಸ್ತುವಿನ ಮೇಲೆ ಎಸಿಡಿನ ಕಲೆಯುಂಟಾದರೆ, ನೀರಿನಲ್ಲಿ ತುಸು ಎಮೋನಿಯಾ ಸೇರಿಸಿ ಸ್ಪಂಜಿನಿಂದ ತೊಳೆದುಬಿಡಿರಿ. (2) ಚರ್ಮದ ಮೇಲೆ ಉಂಟಾದ ಯಾವ ಕಲೆಗಳನ್ನೂ ವ್ಯಾಸಲೀನಿನಿಂದ ಹೋಗಲಾಡಿಸಬಹುದು.

ಬೆಳ್ಳಿಪಾತ್ರೆಗಳ ಮೇಲಿನ ಕಪ್ಪು ಕಲೆ: ಇವನ್ನು ತೆಗೆಯಬೇಕಿದ್ದರೆ, ಬಿಸಿನೀರಿಗೆ ಸ್ವಲ್ಪ ವಾಷಿಂಗ್ ಸೋಡಾ ಸೇರಿಸಿ ಅರ್ಧ ಗಂಟೆ ಹೊತ್ತು ಬೆಳ್ಳಿ ಪಾತ್ರೆಯಲ್ಲಿ ಹಾಕಿಡಿರಿ ಪಾತ್ರೆ ಚೆನ್ನಾಗಿ ನೆನೆದ ಮೇಲೆ ಉಜ್ಜಿ ತೊಳೆಯಿರಿ. ಆ ಕಪ್ಪುಕಲೆ ಹಾರಿಹೋಗುವುದು.

ಚಾ ಕಪ್ಪುಗಳಲ್ಲಿನ ಕಲೆ: ಉಪ್ಪು ಮತ್ತು ಸಿರ್ಕಾದಿಂದ ತಯಾರಿಸಿದ ಪದಾರ್ಥದಿಂದ ಚಾ ಕಪ್ಪುಗಳಲ್ಲಿನ ಕಲೆಗಳು ದೂರವಾಗುತ್ತವೆ. (ಸೋಡಾ ಖಾರವೂ ಸಹಾಯಕ.)

ಪಾದರಕ್ಷೆಗಳ ಮೇಲಿನ ಕಲೆ: ಕಂದು ಬಣ್ಣದ ಪಾದರಕ್ಷೆಯ ಮೇಲೆ ಕಲೆಗಳಾಗಿದ್ದರೆ, ಬಾಳೆಹಣ್ಣಿನ ಸಿಪ್ಪೆಯ ಒಳಭಾಗದಿಂದ ಆ ಕಲೆಗಳನ್ನು ಚೆನ್ನಾಗಿ ಉಜ್ಜಿ ಅನಂತರ ಬಿಳಿಬಟ್ಟೆಯಿಂದ ಒರಸಿಬಿಡಿರಿ; ಎಂದಿನಂತೆ ಪಾಲಿಶ್ ಮಾಡಿರಿ; ಆಗ ಕಲೆಗಳೆಲ್ಲ ಮಾಯವಾಗುವುವು.

ಹಾರ್ಮೋನಿಯಂ ಮೇಲಿನ ಕಲೆ: ನಿಮ್ಮ ಹಾರ್ಮೋನಿಯಂ ಪೆಟ್ಟಿಗೆಯ ದಂತದ ಪಟ್ಟಿಗಳು ಹಳದಿ ಬಣ್ಣಕ್ಕೆ ತಿರುಗಿದ್ದರೆ, ಒಂದು ಬಟ್ಟೆಯನ್ನು ಬಿಸಿಹಾಲಲಿಟ್ಟು; ಆ ಪಟ್ಟಿಗಳನ್ನು ಉಜ್ಜಿ ತೊಳೆಯಿರಿ. ಅವು ಮೊತ್ತಮೊದಲಿನ ಅಚ್ಚ ಬಿಳುಪು ಬಣ್ಣಕ್ಕೆ ತಿರುಗುತ್ತವೆ.

ಬೆಳ್ಳಿಯ ಸ್ವಚ್ಛತೆ: 1) ಬೆಳ್ಳಿಯ ಆಭರಣಗಳು ಕೊಳೆಯಾಗಿದ್ದರೆ ಅದನ್ನು ಅಲ್ಯೂಮಿನಿಯಂ ಪಾತ್ರೆಯಲ್ಲಿಟ್ಟು ಕುದಿಸಿರಿ. ನೀರು ಕುದಿದ ಬಳಿಕ ಆಭರಣಗಳು ಸ್ಪಷ್ಟವೂ ಹೊಳಪುಳ್ಳವೂ ಆಗುವುವು. ಈ ಕ್ರಿಯೆಯಿಂದ ಅಲ್ಯೂಮಿನಿಯಂ ಪಾತ್ರೆ ಕೊಳೆಯಾಗುವುದು. ಅದನ್ನು ಸಾಬೂನಿನಿಂದಾಗಲೀ ಬೂದಿಯಿಂದಾಗಲೀ ತೊಳೆದುಬಿಡಬಹುದು. ಆದರೆ ಕೆಲವರು ಅಲ್ಯೂಮಿನಿಯಂ ಪಾತ್ರೆಗಳನ್ನು ಸೋಡಾ ನೀರಿನಿಂದ ತೊಳೆಯುತ್ತಾರೆ. ಅದರಿಂದ ಪಾತ್ರೆಗಳ ಹೊಳಪು ಮಾಯವಾಗುವುದರಿಂದ ಸೋಡಾ ನೀರನ್ನು ಈ ಪಾತ್ರೆ ತೊಳೆಯಲು ಉಪಯೋಗಿಸಬಾರದು. (2) ಬಟಾಟೆಯನ್ನು ನೀರಿನಲ್ಲಿ ಬೇಯಿಸಿದ ಬಳಿಕ ಆ ನೀರಿನಿಂದ ಬೆಳ್ಳಿಪಾತ್ರೆಗಳ ಮೇಲಿನ

ಕಲೆಗಳನ್ನು ಹೋಗಲಾಡಿಸಬಹುದು. ಕಾಗದ ಸುಟ್ಟ ಬೂದಿಯಿಂದ ಬೆಳ್ಳಿ ಪಾತ್ರೆಗಳನ್ನು ಶುಭ್ರಗೊಳಿಸಬಹುದು. (3) ಬೆಳ್ಳಿಯ ವಸ್ತುಗಳು ಕಪ್ಪಾಗದಂತೆ ನೋಡಿಕೊಳ್ಳಬೇಕಾದರೆ, ಅವನ್ನು ಒಣಗಿದ ಹಿಟ್ಟಿನಲ್ಲಿಡಿರಿ.

ಚಿತ್ತದ ವಸ್ತು ಮೊದಲಾದುವು: ಚಿತ್ರದ ವಸ್ತುಗಳನ್ನೂ ಬಿದಿರಿನ ಫರ್ನೀಚರುಗಳನ್ನೂ ಉಪ್ಪು ಸೇರಿಸಿದ ತಣ್ಣೀರಿನಿಂದ ತೊಳೆಯಿರಿ.

ತೆಳುವಾದ ಚರ್ಮದ ವಸ್ತುಗಳನ್ನು ಸ್ವಚ್ಛಗೊಳಿಸಬೇಕಿದ್ದರೆ ಅರ್ಧ ಸಿದ್ಧೆ ಹಾಲಿಗೆ ೨೦ ಹನಿ ಕರ್ಪೂರದೆಣ್ಣೆ ಹಾಕಿ ಅದರಿಂದ ಉಜ್ಜಬೇಕು.

ಚಿತ್ರಗಳ (ಗಿಲೀಟಿನ) ಫ್ರೇಮುಗಳನ್ನು ನೀರುಳ್ಳಿಯ ನೀರಿನಿಂದ ಸ್ವಚ್ಛಗೊಳಿಸಬಹುದು.

'ಚಾ' ಎಲೆ: (1) ಚಾ ಮಾಡಿದ ನಂತರ ಸೊಪ್ಪನ್ನು ಒಂದು ಡಬ್ಬಿಯಲ್ಲಿ ಸಂಗ್ರಹಿಸಬೇಕು. ಕನ್ನಡಿ, ಗಾಜು ಮುಂತಾದುವನ್ನು ಸ್ವಚ್ಛ ಮಾಡಲು ಇದು ಉಪಯುಕ್ತವಾಗಿದೆ. ಮೀನು ಹಾಕಿದ ಪಾತ್ರೆಗಳ ವಾಸನೆ ತೆಗೆಯಲು ಈ ಸೊಪ್ಪನ್ನು ಹಾಕಿ ಕುದಿಸಬಹುದು. (2) ಒಣಗಿದ ಚಾ ಎಲೆಗಳನ್ನು ಬೆಂಕಿಯಲ್ಲಿ ಸುಡುವುದರಿಂದ ನೊಣಗಳು ಹಾರಿಹೋಗುತ್ತವೆ. (3) ಹೊಸ ಫರ್ನೀಚರುಗಳ ಮೇಲೆ ಅಂಟಿದ ಕೊಳೆಯನ್ನು ಹೋಗಲಾಡಿಸಲು ಚಾದಾನಿಯಲ್ಲಿ ಉಳಿದ ಚಾ ಎಲೆಗಳನ್ನು ಸಾಮಾನುಗಳ ಮೇಲೆ ಉಜ್ಜಿ ಒಣಬಟ್ಟೆಯಿಂದ ಒರಸಿರಿ.

ಕಿಲುಬು: ಮನೆಯೊಳಗಿನ ಕತ್ತಿ, ಈಳಿಗೆಗಳಿಗೆ ಕಿಲುಬು ಹಿಡಿದಿದ್ದರೆ ಅವಕ್ಕೆ ತೆಂಗಿನೆಣ್ಣೆ ಹಚ್ಚಿ ಹಾಗೆಯೇ ಇಡಬೇಕು. ಮರುದಿನ ಅವನ್ನು ಸೀಮೆಸುಣ್ಣದಿಂದ ಉಜ್ಜಿದರೆ, ಅವು ಹೊಸ ಮೆರುಗಿನಿಂದ ಥಳಥಳಿಸುವುವು.

ಸ್ವಚ್ಛತೆ: (೧) ಬಿಳಿಯ ಬಟ್ಟೆಗಳನ್ನೊಗೆಯುವಾಗ ನೀರಿನ ಬಾಲ್ದಿಯಲ್ಲಿ ಅರ್ಧ ಲಿಂಬೆಹಣ್ಣಿನ ರಸವನ್ನು ಹಿಂಡಿಹಾಕಿದರೆ ಬಟ್ಟೆಗಳು ಇನ್ನೂ ಹೆಚ್ಚಾಗಿ ಸ್ವಚ್ಛವಾಗುವುವು. (೨) ಬೇಯಿಸಿದ ಬಟಾಟೆಯನ್ನು ಸಾಬೂನಿನಂತೆಯೇ ಸ್ವಚ್ಛತೆಗಾಗಿ ಉಪಯೋಗಿಸಬಹುದು. ಎಣ್ಣೆ, ಶಾಯಿ ಅಥವಾ ಇತರ ಕೊಳೆ ತಗಲಿದ ಕೈಯನ್ನು ಬೇಯಿಸಿದ ಬಟಾಟೆಯಿಂದ ತಿಕ್ಕಿ, ಬಿಸಿನೀರಿನಿಂದ ತೊಳೆದರೆ ಸ್ವಚ್ಛವಾಗುತ್ತದೆ.

ನಿಂಬೆಯ ರಸ ಸ್ವಲ್ಪ ಮಾತ್ರ ಬೇಕಿದ್ದರೆ, ಹಣ್ಣನ್ನು ಮುಳ್ಳಿನಿಂದ ಚುಚ್ಚಿ ಹಿಂಡಿ, ಬೇಕಾದಷ್ಟೇ ರಸ ಪಡೆಯಬಹುದು. ಹೋಳುಮಾಡಿ ಇಡೀ ಹಣ್ಣನ್ನೇ ಹಾಳುಮಾಡಬೇಕಾಗಿಲ್ಲ.

ನಿಂಬೆಯ ಹಣ್ಣನ್ನು ಎಷ್ಟು ದಿನಗಳಾದರೂ ಕೆಡದಂತೆ ಇಡಬಹುದು. ಒಂದು ಮಡಕೆಯಲ್ಲಿ ಅರ್ಧದಷ್ಟು ಹಸಿಮಣ್ಣನ್ನು ಹಾಕಿ, ಅದರಲ್ಲಿ ನಿಂಬೆ ಹಣ್ಣುಗಳನ್ನು ಹೂಳಿಟ್ಟು ಗಾಳಿಸೇರದಂತೆ ಮಡಕೆಯ ಬಾಯಿ ಮುಚ್ಚಿ, ಮುಚ್ಚಳದ ಸುತ್ತಲೂ ಜೇಡಿಮಣ್ಣನ್ನು ಮೆತ್ತಬೇಕು.

ಅಥವಾ ತೇವವಾದ ಮರಳಿನೊಳಗೆ ನಿಂಬೆಯ ಹಣ್ಣುಗಳನ್ನು ಹೂತಿಟ್ಟರೆ, ಅವು ವಾರಗಟ್ಟಲೆ ಕೆಡದೆ, ಒಣಗದೆ ರಸಭರಿತವಾಗಿರುತ್ತವೆ. ಮರಳು ಒಣಗಿದಂತೆಲ್ಲ ಮೆಲ್ಲನೆ ನೀರು ಚಿಮುಕಿಸಬೇಕು

ಟೊಮೆಟೊಗಳನ್ನು ಸುಲಭವಾಗಿ ಕತ್ತರಿಸಬೇಕಿದ್ದರೆ ಅವನ್ನು ಮೊದಲು ಬಿಸಿನೀರಿನಲ್ಲಿ ನೆನಸಿ, ಕೆಲಹೊತ್ತಿನನಂತರ ತೆಗೆದು ತಣ್ಣೀರಿನಲ್ಲಿ ಮುಳುಗಿಸಿಡಿರಿ. ಹಾಗೆ ಮಾಡಿದರೆ ಹೊರ ಸಿಪ್ಪೆ ಮೃದುವಾಗುತ್ತದೆ.

ಉಪಯೋಗಿಸಿ ಬಿಟ್ಟ ತಾಜಾ ನಿಂಬೆಹಣ್ಣಿನ ಹೋಳು ದೊರೆಯುವಂತಿದ್ದರೆ, ಅದನ್ನು ತಣ್ಣೀರಿನ ಜೊತೆಯಲ್ಲಿ ಉಜ್ಜಿ ತೊಳೆದುಕೊಂಡರೆ ನೀರುಳ್ಳಿವಾಸನೆ ತೊಲಗುವುದು. ಅಥವಾ ವಾಸನೆ ಬರುವ ಭಾಗಕ್ಕೆ ಉಪ್ಪುಹಾಕಿ ತಿಕ್ಕಿ, ತಣ್ಣೀರಿನಿಂದ ತೊಳೆದುಬಿಡಬೇಕು.

ನೀರುಳ್ಳಿ ಹೆರಚುವಾಗ ಕಣ್ಣೀರು ಬರುತ್ತದೆಯಷ್ಟೆ? ಒಂದು ಪಾತ್ರೆಯಲ್ಲಿ ಸುಮಾರಾಗಿ ತಣ್ಣೀರು ತುಂಬಿಕೊಂಡು ನೀರುಳ್ಳಿಯನ್ನು ಅದರಲ್ಲಿ ಮುಳುಗಿಸಿ ನೀರಲ್ಲಿಯೇ ಅದನ್ನು ಚೂರಿಯಿಂದ ಕತ್ತರಿಸಿ ಹೆಚ್ಚಿರಿ. ಇದರಿಂದ ಅವು ತಾಜಾ ಆಗಿಯೂ ಉಳಿಯುವುವು; ಹೆಚ್ಚಿದ ಹಾಗೆಲ್ಲ ಹೊರ ಹವೆಯಿಂದ ಮುದುಡುವುದೂ ತಪ್ಪುತ್ತದೆ.

ಅಥವಾ ನೀರುಳ್ಳಿಯ ಸಿಪ್ಪೆ ತೆಗೆಯುವಾಗ ಬುಡದ ಕಡೆಯಿಂದ ಮೇಲಕ್ಕೆ ಅದರ ಸಿಪ್ಪೆ ತೆಗೆಯುತ್ತಾ ಹೋಗಿರಿ. ಇದರಿಂದ ನಿಮ್ಮ ಕಣ್ಣುಗಳಲ್ಲಿ ನೀರು ತುಂಬುವುದಿಲ್ಲ.

ತಗಣೆಗಳ ಕಾಟ ತಪ್ಪಿಸಿಕೊಳ್ಳಬೇಕಿದ್ದರೆ ನಿಮ್ಮ ಕಂಬಳಿಯ ಅಡಿ ಒಂದು ಕರ್ಪುರದ ತುಂಡು ಇಡಿರಿ.

ಮನೆ ಕಟ್ಟುವಾಗ ಮಣ್ಣು ಹಾಗೂ ಕಟ್ಟಿಗೆ ಕೂಡುವ ಕಡೆಗಳಲ್ಲಿ ತಾವರೆಯ ಸೊಪ್ಪನ್ನು ಹಾಕಿದರೆ ಗೆದ್ದಲು ಹತ್ತುವುದಿಲ್ಲ.

ನೊಣದ ಹಾವಳಿಯನ್ನು ಹೋಗಲಾಡಿಸಲು ಅಂಟಿನ ಪಟ್ಟಿಯನ್ನು ತಯಾರಿಸಬೇಕು. ಬೆಲ್ಲವನ್ನು ನೀರಲ್ಲಿ ಕರಗಿಸಿ ಗಟ್ಟಿಯಾದ ಪಾಕಮಾಡಿ

*

ಕೊಳ್ಳಿರಿ. ಈ ಪಾಕಕ್ಕೆ ಅರ್ಧದಷ್ಟು ರಾಳದ ರಸವನ್ನೂ ೧/೪ ಭಾಗದಷ್ಟು ಅಗಸೇ ಎಣ್ಣೆಯನ್ನೂ ಸೇರಿಸಿರಿ. ೨-೩ ಅಂಗುಲ ಅಗಲ ಮತ್ತು ೨-೩ ಅಡಿ ಉದ್ದದ ದಪ್ಪ ಕಾಗದವನ್ನು ಕತ್ತರಿಸಿ ಒಂದು ಕೊನೆಗೆ ದಾರಕಟ್ಟಿ ಮೇಲಿನ ಪಾಕವನ್ನು ಎರಡು ಬದಿಗೂ ಸಮನಾಗಿ ಸವರಿ ಮನೆಯ ಮೂಲೆ ಮೂಲೆಗೂ ತೂಗುಹಾಕಿರಿ. ಇದೇ ಅಂಟಿನ ಪಟ್ಟಿ. ಬೆಲ್ಲದ ಸಿಹಿಗೆ ಆಕರ್ಷಿತವಾದ ನೊಣಗಳು ಪಾಕದ ಅಂಟಿಗೆ ಕಾಲು ಸಿಕ್ಕಿಸಿಕೊಂಡು, ರಾಳದ ವಿಷದಲ್ಲಿ ಸತ್ತುಹೋಗುವುವು.

ಎಳೆ ಮಕ್ಕಳ ಕೂದಲು ಗುಂಗುರಾಗಬೇಕಾದರೆ ಅರ್ಧ ಲೋಟ ನೀರಿಗೆ ಒಂದು ನಿಂಬೆಹಣ್ಣನ್ನು ಹಿಂಡಿ ಈ ನೀರಿನಿಂದ ಮಗುವಿನ ತಲೆಯನ್ನು ತೋಯಿಸಿರಿ. ಅನಂತರ ಟವೆಲಿನಿಂದ ಕೂದಲು ಸ್ವಲ್ಪಮಾತ್ರ ಒದ್ದೆಯಿರುವಂತೆ ಒರಸಿರಿ. ಆ ಬಳಿಕ ನಿಮ್ಮ ಬೆರಳುಗಳಿಂದ ಕೂದಲುಗಳನ್ನು ಎಳೆಯೆಳೆಯಾಗಿ ಬಿಡಿಸಿ ಕೈಯಿಂದ ಗುಂಗುರುಮಾಡಿರಿ. ಒಣಗಿದ ಮೇಲೂ ಈ ಗುರುತು ಉಳಿಯುತ್ತದೆ. ಕೆಲದಿನಗಳ ವರೆಗೆ ಹೀಗೆಯೇ ಮಾಡಿದರೆ ಗುಂಗುರು ಶಾಶ್ವತವಾಗುತ್ತದೆ.

ತಲೆಯ ಮೇಲೆ ಕೂದಲು ದಪ್ಪವಾಗಿದ್ದರೆ ಅದನ್ನು ತೆಳುಮಾಡಲು ದಿನಾಲೂ ಒಳ್ಳೆಯ ತೆಂಗಿನೆಣ್ಣೆ ಹಚ್ಚಬೇಕು.

ನಿಮ್ಮ ಮಗುವಿನ ಕಿವಿಯಲ್ಲಿ ತಗಣಿಯೋ, ಗುಂಗಾಡೋ ಯಾ ಇನ್ನಾವ ಹುಳವೋ ಹೊಕ್ಕಿದೆಯೆಂದಿಟ್ಟುಕೊಳ್ಳಿರಿ. ಆಗ ಅದನ್ನು ಹೊರ ತೆಗೆಯಬೇಕಾದರೆ ಸ್ವಲ್ಪ ತೆಂಗಿನೆಣ್ಣೆಯನ್ನು ಸಾಕಷ್ಟು ಬಿಸಿಮಾಡಿ ಕಿವಿಗೆ ಹಾಕಿರಿ. ಎಣ್ಣೆಹಾಕಿದ ಕಿವಿಯನ್ನು ಮೇಲೆ ಮಾಡಿ ಮಲಗಿಸಿರಿ. ತುಸು ಹೊತ್ತಿನಲ್ಲೇ ಒಳಗಿದ್ದ ಹುಳುಗಳೆಲ್ಲ ಸತ್ತುಹೋಗುತ್ತವೆ; ಅನಂತರ ಆ ಕಿವಿಯನ್ನು ಕೆಳಗೆ ಮಾಡಿ ಮಲಗಿಸಿದರೆ ಎಣ್ಣೆಯೊಂದಿಗೆ ಸತ್ತ ಹುಳಗಳೂ ಹೊರಬರುತ್ತವೆ. ಒಂದು ವೇಳೆ ಸತ್ತ ಹುಳ ಹೊರಬರದಿದ್ದರೆ ಉಗುರು ಬೆಚ್ಚಗಿನ ನೀರಿನ ಪಿಚಕಾರಿಯಿಂದ ಮಗುವಿನ ಕಿವಿಗೆ ನೀರು ಹೊಡೆಯಿರಿ. ಇದರಿಂದ ಸತ್ತ ಹುಳವಲ್ಲದೆ ಇನ್ನಿತರ ಹೊಲಸೂ ಹೊರಹೊರಡುವುದು.

ನಿಮ್ಮ ಮೈಚರ್ಮ ಒಡೆದಿದ್ದರೆ ರಾತ್ರಿ ಮಲಗುವ ಮೊದಲು ಆ ಒಡೆದ ಭಾಗಕ್ಕೆ ಸ್ವಲ್ಪ ಸಾಸಿವೆಯೆಣ್ಣೆಯನ್ನು ಹಚ್ಚುತ್ತ ಇರಬೇಕು. ಕೆಲ ದಿನಗಳಲ್ಲೇ, ಒಡೆದ ಭಾಗದಲ್ಲಿ ಹೊಸ ಮೃದು ಚರ್ಮ ಬಂದು, ಚರ್ಮ ಒಡೆಯುವುದು ನಿಲ್ಲುವುದು.

ನಿಮ್ಮ ಅಂಗಾಲುಗಳು ಒಡೆದು ಬಿರುಕುಬಿಟ್ಟದ್ದರೆ ಪ್ರತಿದಿನ ಮಲಗುವ ಮೊದಲು ಬಿಸಿನೀರಿಗೆ ಎರಡು ಚಮಚೆ ಅಡಿಗೆ ಸೋಡಾ ಬೆರಸಿ ಆ ನೀರಿನಲ್ಲಿ ೨೦ ನಿಮಿಷಕಾಲ ಕಾಲುಗಳನ್ನು ನೆನಸಿರಿ. ಅನಂತರ ಒಡೆದ ಭಾಗಕ್ಕೆ ವ್ಯಾಸಲಿನ್ ಹಾಕಿ ತಿಕ್ಕಿರಿ. ಒಂದು ವಾರದೊಳಗೆ ಬಿರುಕು ಮಾಯವಾಗುತ್ತದೆ.

ಮರದ ವಸ್ತುಗಳು ಮುರುಟಿಹೋಗದಂತಿರಬೇಕಾದರೆ ಅವುಗಳ ಮೇಲೆ ಗ್ಲಿಸರಿನ್ ಹಚ್ಚಿರಿ.

ಗ್ಲಾಸಿನೊಳಗೆ ಗ್ಲಾಸು ಸೇರಿ ಅಂಟಿಕೊಂಡರೆ, ಒಳಗಿನ ಗ್ಲಾಸಿನಲ್ಲಿ ತಣ್ಣೀರು ತುಂಬಿ, ಹೊರಗಿನ ಗ್ಲಾಸನ್ನು ಬಿಸಿನೀರಿನಲ್ಲಿ ಕೆಲವು ಕ್ಷಣ ಅದ್ದಿಡಿರಿ.

ಹೊತ್ತಿದ ಹಾಲು ತಣ್ಣಗಾಗುವ ಮೊದಲೇ ಅದಕ್ಕೆ ಒಂದು ಚಿಟಿಕೆ ಉಪ್ಪು ಹಾಗೂ ಒಂದು ಚಮಚೆ ಸಕ್ಕರೆ ಹಾಕಿದರೆ ಅದರ ಹಾಳುರುಚಿಯು ಹೋಗುವುದು.

ಮಳೆಗಾಲದ ವೇಳೆ ಉಪ್ಪಿನೊಟ್ಟಿಗೆ ಸ್ವಲ್ಪ ಅಕ್ಕಿಕಾಳುಗಳನ್ನು ಹಾಕಿಟ್ಟರೆ ಉಪ್ಪು ನೀರೊಡೆಯುವುದಿಲ್ಲ.

ಲಾಟೀನನ್ನುರಿಸುವಾಗ ಎಣ್ಣೆಯಲ್ಲಿ ಒಂದು ಕಾಳು ಉಪ್ಪನ್ನಾಗಲೀ, ಕರ್ಪೂರದ ತುಂಡನ್ನಾಗಲೀ ಹಾಕಿಬಿಟ್ಟರೆ ಎಣ್ಣೆ ಕಡಿಮೆ ಉರಿದು, ದೀಪ ಚೆನ್ನಾಗಿ ಬೆಳಗುವುದು.

ಕುದಿಯುವ ಹಾಲಿನ ಉಕ್ಕು ಹೊರಚೆಲ್ಲದಿರಬೇಕಾದರೆ, ಒಂದು ಚಮಚೆಯನ್ನು ಹಾಕಿ ನೋಡಿರಿ.

ನಿಮಗೆ ಬೇಕಾದಷ್ಟು ತತ್ತಿಗಳನ್ನು ತೆಗೆದುಕೊಂಡು ಅದನ್ನು ಒಂದೊಂದಾಗಿ ಕೆಸರಿನಲ್ಲಿ ಪೂರಾ ಅದ್ದಿ ಅವನ್ನು ಒಂದು ತೆಗ್ಗಿನಲ್ಲಿ ಜೋಕೆಯಿಂದ ಹೂತು ಮಣ್ಣು ಮುಚ್ಚಿರಿ; ಮುಂದೆ ನಿಮಗೆ ಬೇಕಾದಾಗ ಅವನ್ನುಪಯೋಗಿಸಬಹುದು. ಎಂದೂ ಕೆಡುವುದಿಲ್ಲ. ಕೆಸರು ಮಾತ್ರ ಗಟ್ಟಿಯಾಗಿರಬೇಕು.

ಬಟ್ಟೆಗಳಿಗೆ ನೀಲಿಹಾಕುವಾಗ ಅಲ್ಲಲ್ಲಿ ಕಲೆಗಳು ಎದ್ದು ಕಾಣುವಂತೆ ಉಳಿಯುವವು. ಕಲೆಗಳು ಕಾಣದಂತೆಯೂ ನೀರಲ್ಲಿ ನೀಲಿಯು ಒಂದೇ ಸಮನಾಗಿ ಆಗುವಂತೆಯೂ ಮಾಡಬೇಕಿದ್ದರೆ, ನೀರಿಗೆ ನೀಲಿ ಹಾಕುವಾಗ, ಒಟ್ಟಿಗೆ ಒಂದು ದೊಡ್ಡ ಚಮಚೆಯಷ್ಟು ಉಪ್ಪು ಹಾಕಬೇಕು. ಹಾಗೆ ಮಾಡಿದರೆ ನೀಲಿಯು ನೀರಲ್ಲೆಲ್ಲ ಸಮನಾಗಿ ಹರಡಿಕೊಳ್ಳುತ್ತದೆ.

ದೇಹದ ಯಾವ ಭಾಗಕ್ಕಾದರೂ ಬೆಂಕಿ ತಗಲಿ ಸುಟ್ಟಂತಾದರೆ, ನೀರು ಮುಟ್ಟಿಸಬೇಡಿ; ಕೂಡಲೇ ಸೀಮೆಯೆಣ್ಣೆ ಹಚ್ಚಿದರೆ, ಗುಳ್ಳೆ ಏಳುವುದಿಲ್ಲ.

ಒಲೆಯ ಬೆಂಕಿ ಹೆಚ್ಚು ಧಗಧಗಿಸಿ ಉರಿಯುತ್ತಿದ್ದರೆ ಅದಕ್ಕೆ ಪುಡಿ ಮಾಡಿದ ಉಪ್ಪನ್ನು ಸ್ವಲ್ಪ ಹಾಕಿರಿ. ಆಗ ಬೆಂಕಿಯ ಹಾರಾಟ ತುಸು ಕಡಮೆಯಾಗಬಹುದು.

ಸೂಜಿಯ ಕಣ್ಣಿನೊಳಗೆ ಸುಲಭವಾಗಿ ನೂಲು ಹಾಕಬೇಕಿದ್ದರೆ, ನಿಮ್ಮ ಬಳಿ ಮೇಣದ ಉಂಡೆಯನ್ನಿಟ್ಟುಕೊಳ್ಳಬೇಕು. ಬೇಕಾದಂತೆಲ್ಲ ನೂಲಿನ ತುದಿಗೆ ಸ್ವಲ್ಪ ಮೇಣ ತಗಲಿಸಿದರೆ ಅದು ಬಿರುಸಾಗುವುದು. ಆಗ ಸೂಜಿಕಣ್ಣಿನಲ್ಲಿ ನೂಲು ಸುಲಭವಾಗಿ ಹೋಗುವುದು.

ಪೆನ್ನನ್ನು ಕಿಸೆಯಲ್ಲಿ ಬುಡ ಕೆಳಗಾಗಿ ಇಟ್ಟಿದ್ದರೂ ಶಾಯಿ ಮೇಲಕ್ಕೇರಿ, ಪೆನ್ನು ಸೋರುತ್ತದೆ. ಇಂತಹ ಸಂದರ್ಭದಲ್ಲಿ ಪೆನ್ನಿನ ಟೋಪನ್ನು ಪರೀಕ್ಷಿಸಿ ನೋಡಿದರೆ ಅದರಲ್ಲಿ ಕಿರುತೂತೊಂದು ಕಾಣಿಸುತ್ತದೆ. ಆ ತೂತು ಮುಚ್ಚಿದ್ದಾಗಲೇ ಈ ಅವಾಂತರ ಆರಂಭವಾಗುವುದು. ಅದನ್ನು ಸೂಜಿಯಿಂದ ಸ್ವಚ್ಛಗೊಳಿಸಿದರೆ ಮುಂದೆ ಪೆನ್ನು ಸೋರಲಾರದು.

ಪಾತ್ರೆಯ ಮುಚ್ಚಳ ತೆಗೆಯಲು ಕೆಲವೊಮ್ಮೆ ಕಷ್ಟವಾಗುವುದು. ಆಗ 'ಸೇಂಡ್ ಪೇಪರ್' ಇಟ್ಟು, ಗಟ್ಟಿಯಾಗಿ ಮುಚ್ಚಳವನ್ನು ತಿರುಗಿಸಬೇಕು. ಈಗ ಕೈಜಾರದೆ ಮುಚ್ಚಳ ತೆರೆಯುವುದು. ಅಥವಾ ಮುಚ್ಚಳವನ್ನು ಮಾತ್ರ ಜಾಗ್ರತೆಯಿಂದ ಬಿಸಿಮಾಡಿದರೂ ಆಗಬಹುದು.

ಅಡಿಗೆಮಾಡುವಾಗ ಬೆಂಕಿಯಾಗಲೀ ಬಿಸಿಯ ಪಾತ್ರೆಯಾಗಲೀ ಕೈ ಮೈಗೆ ತಗಲಿ ಬೊಕ್ಕೆಯೇಳುವುದು ಸ್ವಾಭಾವಿಕ. ಸುಟ್ಟ ಜಾಗದಲ್ಲಿ ಆಕ್ಷಣ ಬಟಾಟೆಯನ್ನು ಕತ್ತರಿಸಿ ಒತ್ತಿಟ್ಟರೆ ಬೊಕ್ಕೆಯೇಳುವುದಿಲ್ಲ.

ಹೊಸ ರೇಶ್ಮೆಯ ಕಾಲ್ಚೀಲಗಳನ್ನು ಧರಿಸುವ ಮೊದಲು ಅವನ್ನು ಚೆನ್ನಾಗಿ ಬಿಸಿನೀರಿನಲ್ಲಿ ತೊಳೆದುಕೊಳ್ಳಬೇಕು. ಆಗ ಅವು ಸಡಿಲಾಗುವ ಸಂಭವ ಬಹು ಕಡಮೆ.

ಗೋಡೆ ಮರಗಳಿಗೆ ಮೊಳೆ ಬಡಿಯುವಾಗ ಮೊಳೆಯ ಮೊನೆಗೆ ಸ್ವಲ್ಪ ತೆಂಗಿನೆಣ್ಣೆ ಸವರಿದರೆ ಬಡಿಯುವ ಶ್ರಮ ಕಡಮೆಯಾಗುತ್ತಿದೆ.

ಕೆಲ ಹೆಂಗಸರಿಗೆ ಮುಖದ ಮೇಲೆ ಮೀಸೆ ಹುಟ್ಟುವುದುಂಟು. ಅದನ್ನು ಕತ್ತರಿಸಿದರೆ ಬಹು ಬೇಗನೆ ಸೊಂಪಾಗಿ ಬೆಳೆದುಬಿಡುತ್ತದೆ. ಆದ್ದ

ರಿಂದ ಕತ್ತರಿಸುವ ಬದಲು, ಮೇಣವನ್ನು ಕರಗಿಸಿ, ಮೀಸೆ ಕೂದಲಿಗೆ ಹಚ್ಚಿ, ಅದು ಒಣಗಿದಾಗ ಕೂದಲನ್ನು ಎಳೆದು ತೆಗೆಯಬೇಕು; ಮತ್ತೆ ಕೆಲವು ತಿಂಗಳ ತನಕ ಹುಟ್ಟುವುದಿಲ್ಲ.

ತಲೆಕೂದಲನ್ನು ಉದ್ದಗೊಳಿಸಬೇಕಾದರೆ ಕಡಲೆಹಿಟ್ಟು ಮತ್ತು ಮೊಸರಿನಿಂದ ತಲೆಯನ್ನು ತೊಳೆದುಕೊಳ್ಳಬೇಕು. ತಲೆಗೂದಲುಗಳ ತುದಿಯು ಸೀಳಿ ಇಬ್ಭಾಗವಾದಾಗ, ಆ ತುದಿಯನ್ನು ಕತ್ತರಿಸುವುದೇ ಉತ್ತಮ. ಇಲ್ಲದಿದ್ದರೆ ಕೂದಲಿನ ಬೆಳವಣಿಗೆಯೇ ನಿಂತುಹೋಗುವುದು.

ಸೊಪ್ಪು ಕಾಯಿಪಲ್ಲೆಗಳನ್ನು ಬೇಯಿಸುವಾಗ ಹೆಚ್ಚಾಗಿ ಸೌಟಿನಿಂದ ತಿರುವಬಾರದು. ಗಾಳಿಯಲ್ಲಿನ ಆಮ್ಲಜನಕವು ಸೊಪ್ಪು ಕಾಯಿಪಲ್ಲೆಗಳ ಒಳನುಗ್ಗಿ, ಅವುಗಳಲ್ಲಿರುವ ವಿಟಮಿನ್‌ಗಳನ್ನು ನಾಶಪಡಿಸುವುದು.

ಆಗಾಗ್ಗೆ ಕ್ಷೌರಮಾಡಿಕೊಳ್ಳುವುದರಿಂದ ಕೆಲವರ ಮುಖ ಕಪ್ಪಾಗುತ್ತ ಹೋಗುತ್ತದೆ. ಅದನ್ನು ನಿವಾರಿಸಲು ನೀರಿನಲ್ಲಿ ಸೇಕಡಾ ೨೦ರಷ್ಟು ಹೈಡ್ರೋಜನ್ ಪೆರೋಕ್ಸೈಡ್ ಸೇರಿಸಿ, ಕ್ಷೌರದ ಬಳಿಕ ಹತ್ತಿಯಿಂದ ಮೆಲ್ಲನೆ ಮುಖಕ್ಕೆ ಸವರಿಕೊಳ್ಳಬೇಕು.

ಬಿಸಿಲಿನಲ್ಲಿ ಹಸು ಎಮ್ಮೆಗಳನ್ನು ನಿಲ್ಲಿಸಿ ಹಾಲು ಕರೆಯಬಾರದು. ಹಾಲಿನ ಮೇಲೆ ಬಿಸಿಲಿನ ಶಾಖ ಬಿದ್ದರೆ ಅದರಲ್ಲಿರುವ ವಿಟಮಿನ್‌ಗಳು ನಾಶವಾಗಿ, ಹಾಲು ನಿಸ್ಸತ್ವವಾಗುವುದು. ಅದಲ್ಲದೆ ಹಸು ಎಮ್ಮೆಗಳು ನೆರಳಲ್ಲಿರುವಾಗ ಕೊಡುವಷ್ಟು ಹಾಲನ್ನು, ಬಿಸಿಲಲ್ಲಿದ್ದಾಗ ಕೊಡುವುದಿಲ್ಲ.

ಬೆಳ್ಳಿ ಇಟ್ಟಲ್ಲೇ ಪಟಕಾರದ ಒಂದು ತುಂಡು ಇಟ್ಟರೆ ಬೆಳ್ಳಿ ಕೊಳೆಯಾಗುವುದಿಲ್ಲ.

ಪಲ್ಯ ಪಚಡಿಗಳನ್ನು ಮಾಡುವಾಗ ಒಂದು ಚಿಟಿಕೆ ಅಡಿಗೆ ಸೋಡಾ ಸೇರಿಸಿದರೆ, ಅವುಗಳಿಗೆ ಆಕರ್ಷಕ ಬಣ್ಣ ಬರಬಹುದು. ಆದರೆ, ಅವುಗಳ ವಿಟಮಿನ್‌ಗಳು ನಾಶವಾಗುವುವು.

ಇರುವೆಗಳ ತೂತುಗಳಲ್ಲಿ ಸೋಡಾ ಬೈಕಾರ್ಬನೇಟ್ ಎರಚಿದರೆ ಅವು ಹೊರಹೊರಡಲಾರವು

ಮೊಟ್ಟೆ(ತತ್ತಿ)ಯನ್ನು ಬೇಯಿಸುವ ಮೊದಲು ಅದರ ಎರಡೂ ಕಡೆಗೆ ಸೂಜಿಯಿಂದ ತೂತುಮಾಡಿ ಬೇಯಿಸಿದರೆ, ಮೊಟ್ಟೆಯೊಡೆದು ಒಳಗಿನ ಆಹಾರದ್ರವ್ಯ ಹೊರಬರುವ ಸಂಭವವಿಲ್ಲ.

ಬಟ್ಟೆಯ ಬಣ್ಣವನ್ನು ದೃಢಗೊಳಿಸಲು ಅದನ್ನು ಪಟಿಕಾರ ಅಥವಾ ಉಪ್ಪು ಸೇರಿಸಿದ ನೀರಿನಲ್ಲಿ ರಾತ್ರಿಯಿಡೀ ಮುಳುಗಿಸಿಡಿರಿ. ಆ ಬಳಿಕ ನೆರಳಿನಲ್ಲಿ ಒಣಗಿಸಿರಿ.

ಬಟ್ಟೆಗೆ ಇಸ್ತ್ರಿ ಸರಿಯಾಗಿ ಹಾಕಬೇಕೆಂಬ ಬಯಕೆಯಿಂದ ಕೆಲವರು ಬಟ್ಟೆಗೆ ಗಂಜಿಯನ್ನು ಹಾಕುವುದುಂಟು. ಇದರಿಂದ ಇಸ್ತ್ರೀಪೆಟ್ಟಿಗೆ ಬಟ್ಟೆಗೆ ಅಂಟಿಕೊಳ್ಳುವ ಸಂಭವವೇ ಹೆಚ್ಚಿರುತ್ತದೆ. ಅದನ್ನು ತಪ್ಪಿಸಬೇಕಾಗಿದ್ದರೆ ಗಂಜಿಯ ಪಾತ್ರೆಯಲ್ಲಿ ಒಂದು ದೊಡ್ಡ ಚಮಚೆಯಷ್ಟು ಪಟಿಕಾರವನ್ನು ಪುಡಿಮಾಡಿ ಹಾಕಬೇಕು. ಇದು ಬಟ್ಟೆಯನ್ನು ಸುಡದಂತೆ ಕಾಪಾಡುವುದಲ್ಲದೆ, ಬಟ್ಟೆಗೆ ಒಂದು ಬಗೆಯ ವಿಶೇಷ ಹೊಳಪನ್ನೂ ಕೊಡುತ್ತದೆ.

ಗುಂಡಿಗಳಿರುವ ಬಟ್ಟೆಗೆ ಇಸ್ತ್ರಿಹಾಕುವಾಗ ಮಾತ್ರ ತುಂಬ ಎಚ್ಚರಿಕೆ ವಹಿಸಬೇಕು. ಮೈ ಒರಸಿಕೊಳ್ಳುವ ಟರ್ಕಿಶ್ ಟವೆಲನ್ನು ಎರಡು ಮೂರು ಪದರು ಮಡಿಕೆಮಾಡಿಟ್ಟು ಅದರ ಮೇಲೆ ಗುಂಡಿಗಳಿರುವ ಬಟ್ಟೆಗಳನ್ನಿರಿಸಿ ಇಸ್ತ್ರಿಮಾಡಬೇಕು. ಆಗ ಗುಂಡಿಗಳು ಆ ಟವೆಲಿನಲ್ಲಿ ಹೂತುಕೊಂಡು, ಹಾಗೆಯೇ ಉಳಿಯುತ್ತವೆ.

ಸೆಕೆಗಾಲದಲ್ಲಿ ಚರ್ಮದಿಂದ ಹೊರಡುವ ಬೆವರು ದುರ್ವಾಸನೆಯಿಂದ ಕೂಡಿರುತ್ತದೆ. ಹೆಚ್ಚು ಬೆವರು ಸುರಿಯುವ ದೇಹಭಾಗದಲ್ಲಿ ಸ್ನಾನದ ಬಳಿಕ 'ಯೂ ಡೀ ಕೊಲೋನ್' ಹಚ್ಚಿಕೊಂಡರೆ ಬೆವರಿನ ದುರ್ವಾಸನೆಯನ್ನು ತಪ್ಪಿಸಿಕೊಳ್ಳಬಹುದು. ದಣಿವು ಉಂಟಾದಾಗಲೂ 'ಯೂ ಡೀ ಕೊಲೋನ್'ನಿಂದ ಒದ್ದೆಯಾದ ಟವೆಲಿನಿಂದ ಮುಖವೊರಸಿಕೊಂಡರೆ ಪುನಃ ಹೊಸ ಹುರುಪು ಉಂಟಾಗುವುದು.

ಇಡೀ ಸಿಗರೇಟಿಗಿಂತ ಸಿಗರೇಟಿನ ಕೊನೆಯ ೧॥ ಅಂಗುಲವು ಅತ್ಯಂತ ಅಪಾಯಕಾರಿಯೆಂದು ವಿಶ್ವವಿಜ್ಞಾನಿಗಳು ಇತ್ತೀಚೆಗೆ ಒಮ್ಮತದ ಅಭಿಪ್ರಾಯ ಕೊಟ್ಟಿದ್ದಾರೆ. ಸಿಗರೇಟಿನ ಮುಂಭಾಗದಲ್ಲಿರುವ ನಿಕೋಟಿನ್ ಮುಂತಾದ ಮಾದಕದ್ರವ್ಯಗಳೆಲ್ಲ ಕೊನೆಯ ೧॥ ಅಂಗುಲಗಳಲ್ಲಿ ಭಟ್ಟಿಯಾಗಿರುತ್ತವೆ. ಕೊನೆಯ ತುಂಡನ್ನು ಸೇದಿದಾಗ ಇಡೀ ಸಿಗರೇಟಿನಲ್ಲಿ ಅಡಗಿದ ವಿಷವು ಶ್ವಾಸಗತವಾಗಿ ಮುಂದೆ ಎದೆಯ ಹುಣ್ಣಿಗೆ (ಕೇನ್ಸರ್) ಕಾರಣವಾಗುತ್ತದೆ. ಸಿಗರೇಟನ್ನು ಅರ್ಧಕ್ಕಿಂತ ಹೆಚ್ಚು ಸೇದಬಾರದು.

ಕಾಲುಗಳು ದಣಿದುಹೋದರೆ ಅವನ್ನು ಒಮ್ಮೆ ಬಿಸಿನೀರಿನಲ್ಲೂ ಒಮ್ಮೆ ತಣ್ಣೀರಿನಲ್ಲೂ ಮುಳುಗಿಸಬೇಕು. ಹೀಗೆ ಹಲವು ಬಾರಿ ಮಾಡಿದಾಗ ದಣಿವು ಕಡಮೆಯಾಗುವುದು. ಆ ಬಳಿಕ ಅವುಗಳಿಗೆ ಎಣ್ಣೆ ಹಚ್ಚಿ ಮಾಲೀಸುಮಾಡಿಕೊಳ್ಳಬೇಕು.

ಹೂವಿನ ಹೂಜೆಯೊಳಗೆ ಹೂಗಳನ್ನು ಇಡುವಾಗ ಅದರೊಳಗಿನ ನೀರಿನಲ್ಲಿ ಸ್ವಲ್ಪ ಉಪ್ಪನ್ನು ಹಾಕಿದರೆ ಹೂಗಳು ಹೆಚ್ಚು ಹೊತ್ತು ನೂತನವೆನ್ನುವಂತೆ ಕಾಣುತ್ತವೆ.

ಬೇಸಗೆಯಲ್ಲಿ ಹೂಗಳನ್ನು ಗಾಜಿನ ಹೂಜೆಯಲ್ಲಿಡದೆ ಚೀನಾ ಅಥವಾ ಕಲ್ಲಿನ ಹೂಜೆಯಲ್ಲಿಟ್ಟರೆ ಅವು ಹೆಚ್ಚು ಹೊತ್ತು ಬಾಡದೆ ಉಳಿಯುತ್ತವೆ.

ಹೊಟ್ಟೆಯಲ್ಲಿ ಕೂದಲು ಹೋಗಿದ್ದರೆ ಅನಾನಸ್ ಹಣ್ಣನ್ನು ತಿನ್ನಬೇಕು. ಕೂದಲಿನಿಂದಾಗುವ ಪೀಡೆ ದೂರಾಗುವುದು. ನೇರಳೆ ಹಣ್ಣುಗಳೂ ಇದಕ್ಕೆ ಉಪಯುಕ್ತವಾಗಿವೆ.

ತಲೆಯಲ್ಲಿ ಹೇನು ಹೆಚ್ಚಾಗಿದ್ದರೆ ರಾತ್ರಿ ನಿದ್ದೆಮಾಡುವಾಗ ಕೂದಲುಗಳಿಗೆ ತೆಳುವಾಗಿ ಡಿ. ಡಿ. ಟಿ. ಪೌಡರ್ ಹಚ್ಚಿಕೊಳ್ಳಿರಿ. ಬೆಳಗ್ಗೆ ಸ್ವಚ್ಛನೀರು ಹಾಗು ಸಾಬೂನಿನಿಂದ ತೊಳೆದುಬಿಡಿರಿ. ಅಥವಾ ಕಾರ್ಬೋಲಿಕ್ ಎಸಿಡ್ ಎಂಬ ದ್ರಾವಕಕ್ಕೆ ಇಪ್ಪತ್ತು ಪಾಲನ್ನು ಎಳ್ಳೆಣ್ಣೆ ಸೇರಿಸಿ ಒಂದೆರಡು ದಿನಗಳನಂತರ ಹಚ್ಚಬೇಕು. ಅಥವಾ ಚಿಮಿಣಿಯೆಣ್ಣೆಗೆ ಸಮಭಾಗ ತೆಂಗಿನೆಣ್ಣೆ ಯಾ ಎಳ್ಳೆಣ್ಣೆ ಸೇರಿಸಿ ಒಂದೆರಡು ದಿನಗಳ ಬಳಿಕ ಹಚ್ಚಬೇಕು; ಕಾಳುಜೀರಿಗೆಯನ್ನು ನಿಂಬೆಹಣ್ಣಿನ ರಸದಲ್ಲಿ ಅರೆದು ಹಚ್ಚಿದರೂ ಆಗಬಹುದು. ಹೀಗೆ ಈ ನಾಲ್ಕು ಕ್ರಮಗಳಿಂದಲೂ ಹೇನಿನ ಉಪದ್ರವ ನಿಲ್ಲುವುದು.

ಸೊಳ್ಳೇ ಕಡಿತಕ್ಕೆ: ನಿಂಬೇಹಣ್ಣಿನ ರಸವನ್ನಾಗಲೀ ಸಿರ್ಕದ ಲೇಪನವನ್ನಾಗಲೀ ಹಚ್ಚುವುದರಿಂದ ಉರಿಯೂ ವೇದನೆಯೂ ಶಮನವಾಗುವುವು. ರಾತ್ರಿ ಮಲಗುವಾಗ ಮೈಗೆ ನಿಂಬೆಯ ರಸವನ್ನು ಹಚ್ಚಿಕೊಂಡರೆ ಸೊಳ್ಳೇ ಕಾಟ ಬರಲಾರದು.

ತಗಣೆ ಕಚ್ಚಿದರೆ: ತಗಣೆ ಕಚ್ಚಿದ ಜಾಗಕ್ಕೆ ಪಟಿಕಾರದ ನೀರನ್ನಾಗಲೀ ಉಪ್ಪುನೀರನ್ನಾಗಲಿ ಹಚ್ಚಬೇಕು.

ಕುರ್ಚಿ, ಮಂಚ ಮೊದಲಾದ ಸಾಮಾನುಗಳ ಸಂದುಗಳಲ್ಲಿ ಬಿಸಿ ನೀರನ್ನು ಹೊಯ್ದರೆ ಇದ್ದ ತಗಣೆಗಳೆಲ್ಲ ಸಾಯುವುದಲ್ಲದೆ ಮತ್ತೆ ಬೇಗನೆ ಹುಟ್ಟುವುದಿಲ್ಲ.

ಅನಾನಸದ ಎಲೆಯ ರಸದಲ್ಲಿ ಸಕ್ಕರೆ ಹಾಕಿಕೊಟ್ಟರೆ ಬಿಕ್ಕು ನಿಲ್ಲುತ್ತದೆ. ಅಥವಾ ಸಾಸಿವೆ ಪುಡಿಯನ್ನು ತುಸು ತುಪ್ಪ ಮತ್ತು ಜೇನುತುಪ್ಪದೊಡನೆ ಕಲಸಿ ನಾಲ್ಕಾರು ಬಾರಿ ನೆಕ್ಕಬೇಕು.

ಮುಖ ದುರ್ಗಂಧಕ್ಕೆ: ತುಳಸಿಯ ಕಷಾಯದಿಂದ ಮುಕ್ಕಳಿಸಿದರೆ ಮುಖ ದುರ್ಗಂಧ ನಿಲ್ಲುತ್ತದೆ.

ಜಿಗಣೆ ಹತ್ತಿಕೊಂಡಾಗ ಅದು ಬೇಗ ಬಿಡುವುದಕ್ಕೆ ಈ ಜಾಗದಲ್ಲಿ ಅರಸಿನ ಹಚ್ಚಬೇಕು.

ಕೂದಲನ್ನು ಸುಟ್ಟು ಬೂದಿಮಾಡಿ ಅದರೊಡನೆ ಹರಳೆಣ್ಣೆಯನ್ನು ಬೆರಸಿ ಹಚ್ಚಿದರೆ ಸುಟ್ಟ ಗಾಯಗಳು ಗುಣವಾಗುತ್ತವೆ. ನೀರಿಳಿಯುತ್ತಿರುವ ಕೆಟ್ಟ ಹುಣ್ಣುಗಳೂ ವಾಸಿಯಾಗುವುವು.

ಜಜ್ಜುವಿಕೆ: ರಕ್ತಗಟ್ಟಿದರೆ ಆ ಭಾಗಕ್ಕೆ ರಕ್ತಬೋಳವನ್ನು ನೀರಲ್ಲಿ ಅರೆದು ಬಿಸಿಮಾಡಿ ಲೇಪಿಸಿದರೆ ನೋವು ನಿಲ್ಲುವುದು.

ಕಜ್ಜಿ: ಶುದ್ಧ ಗಂಧಕವನ್ನು ತಂದು ಪುಡಿಮಾಡಿ ಆರುಪಾಲಷ್ಟು ಎಣ್ಣೆ ಸೇರಿಸಿ ಅರೆದು ಮುಲಾಮು ಮಾಡಬೇಕು. ಕಜ್ಜಿಯಿರುವ ಭಾಗವನ್ನು ಚೆನ್ನಾಗಿ ತೊಳೆದು ಈ ಮುಲಾಮು ಹಚ್ಚಿ ೧೫–೨೦ ನಿಮಿಷಗಳ ವರೆಗೆ ತಿಕ್ಕಿ, ಕಜ್ಜಿ ಬೊಕ್ಕೆಗಳೆಲ್ಲ ಪೂರಾ ಒಡೆಯುವ ವರೆಗೆ ಚೆನ್ನಾಗಿ ಉಜ್ಜಬೇಕು; ಕೆಲವು ದಿನಗಳಲ್ಲೇ ವಾಸಿಯಾಗುವುದು.

ಕಣ್ಣಿಗೆ ಪೆಟ್ಟುತಾಗಿ ಬಾತುಹೋಗಿದ್ದರೆ: ನವಸಾಗರದ ನೀರಿನಿಂದ ತೊಳೆದು ಪಟಿಕಾರದ ಪೋಲ್ಟೀಸು ಕಟ್ಟಬೇಕು.

ಕಣ್ಣಿನೊಳಗೆ ಏನಾದರೂ ಕಸಬಿದ್ದಿದ್ದರೆ ಸಕ್ಕರೆಯ ನೀರನ್ನು ಕಣ್ಣಿನೊಳಗೆ ಸುರಿದು ಅದನ್ನು ಹೊರಪಡಿಸಬಹುದು.

ಸುಣ್ಣದ ಪುಡಿ ಕಣ್ಣಲ್ಲಿ ಬಿದ್ದಿದ್ದರೆ ಸಿರ್ಕದ ನೀರನ್ನು ಕಣ್ಣಿಗೆ ಹಾಕಿ ಆ ಪುಡಿಯನ್ನು ಕರಗಿಸಬಹುದು.

ಬೋಳು ತಲೆ: ಬಾಲ್ಯದಲ್ಲೇ ಉಂಟಾಗಿದ್ದರೆ ನೀರುಳ್ಳಿಯನ್ನು ಸ್ವಲ್ಪ ಜಜ್ಜಿ ಬೋಳಾದ ಭಾಗಕ್ಕೆ ಕೆಲ ದಿನಗಳ ವರೆಗೆ ದಿನಾಲೂ ಹಚ್ಚಬೇಕು.

ಅಗ್ರ (ನಾಲಗೆ ಒಡೆತ): ಪಟಿಕಾರ ಹಾಕಿದ ನೀರನ್ನು ಮುಕ್ಕಳಿಸಬೇಕು.

ಬೆಂದಹುಣ್ಣು (ಸುಟ್ಟಗುಳ್ಳೆ): ಬೆಂಕಿಯಾಗಲಿ ಕಾಸಿದ ಎಣ್ಣೆಯಾಗಲಿ ಲೋಹವಾಗಲಿ ತಾಗಿ ಉಂಟಾಗುವ ಬೆಂದ ಹುಣ್ಣುಗಳಿಗೆ ಕೂಡಲೇ ಸುಣ್ಣದ ಮುಲಾಮು ಅಥವಾ ಎಳ್ಳೆಣ್ಣೆ ಹಚ್ಚಿ ಅದರ ಮೇಲೆ ನಯವಾದ ಅಕ್ಕಿಹಿಟ್ಟನ್ನು ದಪ್ಪವಾಗಿ ಚಲ್ಲಬೇಕು; ಮುಖ್ಯವಾಗಿ, ಸುಟ್ಟ ಜಾಗಕ್ಕೆ ಗಾಳಿಯು ಸ್ಪರ್ಶವಾಗದಂತೆ ನೋಡಿಕೊಳ್ಳಬೇಕು.

ಸುಟ್ಟ ಕಾಗದ: ಕಾಗದವನ್ನು ಸುಟ್ಟು ಅದರ ಹೊಗೆಯನ್ನು ಮೂಗಿನ ಮೇಲೆ ಎಳೆದರೆ ಅರ್ಧ ತಲೆನೋವು ನಿಲ್ಲುವುದು.

ಕಾಗದವನ್ನು ಸುಟ್ಟು ಬಿಸಿನೀರಿಗೆ ಹಾಕಿ ಕುಡಿದರೆ ಅಫೀಂ ಸೇವನೆಯಿಂದಾದ ವಿಷನಷ್ಟವಾಗುವುದು.

ಗೋಧಿಯ ಪುಡಿಯನ್ನು ಮಾಲೀಸುಮಾಡಿದರೆ ಬೆವರು ಸುರಿಯುವುದು ನಿಲ್ಲುವುದು. ಜ್ವರದ ವೇಳೆ ಒಂದೇ ಸವನೆ ಬೆವರು ಸುರಿಯುತ್ತಿದ್ದರೆ ಅಜವಾನವನ್ನು ಹುರಿದು ಪುಡಿಮಾಡಿ ಮೈಗೆ ಹಚ್ಚಿದರೆ ಕೂಡಲೇ ಬೆವರು ಕಡಮೆಯಾಗುತ್ತದೆ.

ದೇಹದ ಯಾವುದೇ ಭಾಗದಲ್ಲಿ ನೋವಿದ್ದರೂ ಅಜವಾನವನ್ನು ನೀರಲ್ಲಿ ಅರೆದು ಬಿಸಿಮಾಡಿ ನೋಯುವ ಜಾಗಕ್ಕೆ ಹಚ್ಚಿದರೆ ನೋವು ನಿಲ್ಲುತ್ತದೆ.

ಮದ್ಯದ ಚಟವನ್ನು ಬಿಡಬೇಕೆನ್ನುವವರು ಅಜವಾನದ ನೀರನ್ನು ಕುಡಿಯುವ ಅಭ್ಯಾಸಮಾಡಿಕೊಳ್ಳಬೇಕು.

ತುಲಸೀ ಎಲೆಗಳಿಂದ ರಸ ತೆಗೆಯಬೇಕಿದ್ದರೆ ಅವಕ್ಕೆ ತುಸು ಜೇನು ತುಪ್ಪ ಹಚ್ಚಿ ಹಿಂಡಿಬಿಡಿರಿ; ಆಗ ಸುಲಭವಾಗಿ ರಸಬರುತ್ತದೆ.

ವಿಷಜಂತು ಚುಚ್ಚಿದ ಗಾಯಕ್ಕೆ ಪಟಿಕಾರವನ್ನು ತಣ್ಣೀರಿನಲ್ಲಿ ನೆನಸಿ ಹಚ್ಚಬೇಕು. ಕೂಡಲೇ ನೋವು ಶಮನವಾಗುವುದು,

ಪ್ರತಿ ವಾರವೂ ಕೊಂಡುಕೊಳ್ಳಿರಿ!

“ಒಂದಾಣೆ ಮಾಲೆ”ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1959ನೇ ಮಾರ್ಚ್ ತಿಂಗಳ ಎರಡನೆಯ ವಾರದ ವರೆಗೆ 226 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

226 ಆಣೆಗಳಿಗೆ ‘ಒಂದಾಣೆ ಮಾಲೆ’ಯು, ಹೊದಿಕೆ ಕೂಡಿ, ಒಟ್ಟು 4458 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ ‘ಒಂದಾಣೆ ಮಾಲೆ’ಗೆ ಬರೆಯುತ್ತಾರೆ. ‘ಅಶ್ಲೀಲ’ ಎಂಬ ಅಂಶವೇ ‘ಒಂದಾಣೆ ಮಾಲೆ’ಯ ಪ್ರಕಟಣೆಗಳಲ್ಲಿರುವುದಿಲ್ಲ.

‘ಒಂದಾಣೆ ಮಾಲೆ’ ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ

‘ಒಂದಾಣೆ ಮಾಲೆ’ ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers, Ltd., Mangalore